1654 (2304) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) –ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂದ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದಂತ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯಲು ಉದ್ದೇಶಿಸಲಾಗಿದೆಯೇ,

ಆ) ರಾಜ್ಯಾದ್ಯಂತ ಹೊಸದಾಗಿ ಎಷ್ಟು ಪ್ರೌಢಶಾಲೆಗಳನ್ನು ತೆರೆಯಲಾಗುವುದು,

ಇ) ಹಿಂದುಳಿದ ಪ್ರದೇಶ ಚಾಮರಾಜನಗರ ಜಿಲ್ಲೆಗೆ ಎಷ್ಟು ಹೊಸ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗುವುದು?

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಹೌದು

ಆ) ಮತ್ತು ಇ) ಆಯಾಯಾ ಸ್ಥಳಗಳ ಶೈಕ್ಷಣಿಕ ಅಗತ್ಯತೆ ಮತ್ತು ಆಯವ್ಯಯದಲ್ಲಿ ಅವಕಾಶದ ಪ್ರಕಾರ ಹಂತ ಹಂತವಾಗಿ ಶಾಲೆಗಳನ್ನು ಮಂಜೂರು ಮಾಡಲಾಗುತ್ತಿದ್ದು, ಇದೊಂದು ಸತತವಾದ ಪ್ರಕ್ರಿಯೆಯಾಗಿದೆ

1655 (2303) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿವೇಶನ ಪಡೆಯಲು ಇದುವರೆಗೂ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು,

ಆ) ರಾಜ್ಯಾದ್ಯಂತ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು,

ಇ) ಬೆಂಗಳೂರು ನಗರದಲ್ಲಿ ಹೊಸದಾಗಿ ನಿವೇಶನಗಳನ್ನು ಹಂಚಿಕ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ,

ಈ) ಹಾಗಿದ್ದಲ್ಲಿ ಯಾವ ಸ್ಥಳಗಳಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು (ಸಂಪೂರ್ಣ ವಿವರ ನೀಡುವುದು)?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಕರ್ನಾಟಕ ಗೃಹ ಮಂಡಳಿಯ ವತಿಯಿಂದ ನಿವೇಶನಗಳನ್ನು ಪಡೆಯಲು ಕೋರಿ 74756 ಅರ್ಜಿಗಳು ಬಂದಿವೆ

ಆ) ಕರ್ನಾಟಕದಾದ್ಯಂತ ಹೊಸದಾಗಿ ಕರ್ನಾಟಕ ಗೃಹ ಮಂಡಳಿಯು ನಿವೇಶನಗಳನ್ನು ಹಂಚಿಕೆ ಮಾಡುವಂತಹ ಸ್ಥಳಗಳ ಬಗ್ಗೆ ಅನುಬಂಧ "ಅ" ರಲ್ಲಿ ವಿವರಿಸಲಾಗಿದೆ

ಇ) ಹೌದು

ಈ) ಸೂರ್ಯನಗರ ಮತ್ತು ಬಂಡೇಮಠ ಯೋಜನೆಗಳಲ್ಲಿನ ಸ್ವತ್ತುಗಳ ಬಗ್ಗೆ ದಿನಾಂಕ 6-03-2007 ರಿಂದ 10-03-2007 ರವರೆಗೆ ಲಾಟರಿ ಮೂಲಕ ಹಂಚಿಕೆ ಮಾಡುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ ಇದರಲ್ಲಿ ಯಶಸ್ವಿಯಾದ ನಿವೇಶನದ ಅರ್ಜಿದಾರರ ಸಂಖ್ಯೆ ಈ ಕೆಳಕಂಡಂತಿರುತ್ತದೆ

ಯೋಜನೆ	ಎಲ್‌ಐಜಿ	ಎಂಐಜಿ	ಹೆಚ್‌ಐಜಿ	ಒಟ್ಟು
ಸೂರ್ಯನಗರ	306	339	129	774
ಬಂಡೇಮಠ	205	160	97	462
ಒಟ್ಟು	**511**	**499**	**226**	**1236**

ಅನುಬಂಧ - ಅ

ಕ್ರ.ಸಂ	ಯೋಜನೆಯ ಹೆಸರು	ಜಿಲ್ಲೆ
1	ಸತ್ತೂರು	ಧಾರವಾಡ
2	ಮರಳೂರು	ತುಮಕೂರು
3	ಭದ್ರಾವತಿ	ಶಿವಮೊಗ್ಗ
4	ಕುಡುಪು	ಮಂಗಳೂರು
5	ಹುಕ್ಕೇರಿ	ಬೆಳಗಾಂ
6	ಚೆನ್ನಪಟ್ಟಣ	ಬೆಂಗಳೂರು (ಗ್ರಾ)

7	ಚಿಂಚೋಳಿ	
8	ವಕ್ಕಲಗ್ವರೆ	ಗುಲ್ಬರ್ಗಾ
9	ಗುರುಮಿಟಕಲ್	
10	ಶೋರಾಪುರ್	
11	ರಾಮಸಮುದ್ರ	ಚಾಮರಾಜನಗರ
12	ಬಸವಕಲ್ಯಾಣ	ಬೀದರ್
13	ಇಟ್ಟಿಂಗಿಹಾಳ್	ಬಿಜಾಪುರ
14	ಚಿಕ್ಕೋಡಿ	
15	ಗೋಕಾಕ್	ಬೆಳಗಾಂ
16	ಮುಧೋಳ್	
17	ಗುಲ್ಬರ್ಗಾ (ಏರ್ ಪೋರ್ಟ್ ಲ್ಯಾಂಡ್)	ಗುಲ್ಬರ್ಗಾ
18	ಲಕ್ಕಮನಹಳ್ಳಿ	ಧಾರವಾಡ
19	ಹಿಂಡಲ್ಗ	ಬೆಳಗಾಂ
20	ಸಮತಡ್ಕೆ	ದಕ್ಷಿಣ ಕನ್ನಡ
21	ಬನ್ನೂರು	ಮೈಸೂರು
22	ಸಂಡೂರ್	ಬಳ್ಳಾರಿ
23	ಕಲ್ಲಹಳ್ಳಿ	ಶಿವಮೊಗ್ಗ
24	ಸಿಂಧಗಿ	ಬಿಜಾಪುರ
25	ಲಿಂಗಸಗೂರು	ರಾಯಚೂರು
26	ರಾಜ್‌ಪುರ ಪಿರಿಯಾಪಟ್ಟಣ	ಮೈಸೂರು
27	ಕುವೆಂಪುನಗರ 2ನೇ ಹಂತ	ಬಳ್ಳಾರಿ
28	ಯಾದಗಿರಿ	ಗುಲ್ಬರ್ಗಾ
29	ಸೌದತ್ತಿ	ಬೆಳಗಾಂ